# ಕರ್ನಾಟಕ ವಿಧಾನ ಪರಿಷತ್

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 2040 |
| **ಸದಸ್ಯರ ಹೆಸರು** | ಶ್ರೀ ಎಂ.ನಾರಾಯಣಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 27.03.2020 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಶಿವಕೋಟೆ ಗ್ರಾಮ ಪಂಚಾಯಿತಿ ಮತ್ತಕೂರು ಗ್ರಾಮದ ಸಂಪರ್ಕ ರಸ್ತೆಯು ಶಿವಕೋಟೆ ಕ್ರಾಸ್‌ನಿಂದ ಸೀತ ಕೊಪನಹಳ್ಳಿಯವರೆಗೆ ಹಾಳಾಗಿದ್ದು, ದ್ವಿಚಕ್ರ ವಾಹನ ಸಂಚಾರಕ್ಕೂ ಸಾಧ್ಯವಿಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈವರೆಗೂ ರಸ್ತೆ ಕಾಮಗಾರಿ ಕೆಲಸ ಕೈಗೊಳ್ಳದಿರಲು ಕಾರಣವೇನು; ಎಷ್ಟು ದಿವಸಗಳಲ್ಲಿ ರಸ್ತೆ ದುರಸ್ತೆ ಕೆಲಸ ಪೂರ್ಣಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು; | ಬಂದಿದೆ.<br>• ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಶಿವಕೋಟೆ-ಹೆಸರಘಟ್ಟ ಗ್ರಾಮ ಪಂಚಾಯಿತಿ ಮತ್ತಕೂರು ಗ್ರಾಮದ ಸಂಪರ್ಕ ರಸ್ತೆಯು ಶಿವಕೋಟೆ ಕ್ರಾಸ್‌ನಿಂದ ಸೀತ ಕೊಪನಹಳ್ಳಿಯವರೆಗಿನ 3.00 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲು ರೂ.200.00 ಲಕ್ಷಗಳ ಅನುದಾನದ ಅವಶ್ಯಕತೆಯಿದ್ದು, ಆಯವ್ಯಯದಲ್ಲಿ ಹಂಚಿಕೆಯಾಗುವ ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮಕೈಗೊಳ್ಳಬೇಕಿದೆ.<br>• ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಸೀತಕೆಂಪನಹಳ್ಳಿಯಿಂದ ಮತ್ತೂರು ವರೆಗಿನ 2.24 ಕಿ.ಮೀ. ಉದ್ದದ ಮತ್ತೊಂದು ರಸ್ತೆಯನ್ನು 2015-16 ನೇ ಸಾಲಿನಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಹಂತ-3 ರಡಿ ಅಭಿವೃದ್ಧಿಪಡಿಸಲಾಗಿದ್ದು, ಪ್ರಸ್ತುತ ರಸ್ತೆಯು 4 ನೇ ವರ್ಷದ ನಿರ್ವಹಣೆಯಲ್ಲಿದ್ದು, ಉತ್ತಮ ಸ್ಥಿತಿಯಲ್ಲಿರುತ್ತದೆ. |
| ಆ. | ಯಲಹಂಕ ತಾಲ್ಲೂಕಿನ ಸರ್ಕಾರದ ಪಶುಪಾಲನಾ ಇಲಾಖೆಯು ರಾಜ್ಯ ಕೋಳಿ ಸಾಗಾಣಿಕೆ ಕೇಂದ್ರ, ಹಂದಿ ಸಾಗಾಣಿಕೆ ಕೇಂದ್ರ, ಡೈರಿ ಫಾರಂನಿಂದ ಮತ್ತಕೂರು ಗ್ರಾಮಕ್ಕೆ ಬ್ರಿಟೀಷರ ಕಾಲದಿಂದ ಇದ್ದಂತಹ ರಸ್ತೆಗಳನ್ನು ಮುಚ್ಚಿರುವುದರಿಂದ ರೈತರಿಗೆ, ಕಾರ್ಮಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಹಾಗೂ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಹಿಂದೆ ಇದ್ದಂತಹ | ಪಶುಪಾಲನಾ ಇಲಾಖೆಯ, ರಾಜ್ಯ ಕೋಳಿ ಸಾಗಾಣಿಕೆ ಕೇಂದ್ರ, ಹಂದಿ ಸಾಗಾಣಿಕೆ ಕೇಂದ್ರ, ಡೈರಿ ಫಾರಂನಿಂದ ಮತ್ತೂರು ಗ್ರಾಮಕ್ಕೆ ಬ್ರಿಟೀಷರ ಕಾಲದಿಂದ ಇದ್ದಂತಹ ರಸ್ತೆಗಳನ್ನು ಮುಚ್ಚಿರುವುದಿಲ್ಲ (ಸದರಿ ಕ್ಷೇತ್ರದ ನಕ್ಷೆ ಹಾಗೂ ಮತ್ತೂರು ನಕ್ಷೆ ಪ್ರತಿ ಲಗತ್ತಿಸಿದೆ). |

| | | |
|---|---|---|
| | ರಸ್ತೆಯನ್ನು ಕಾರ್ಮಿಕರಿಗೆ, ರೈತರಿಗೆ ಸುತ್ತಮುತ್ತಲಿನವರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಂಚಾರಕ್ಕೆ ಅನುವು ಮಾಡಿಕೊಡುವುದು ಯಾವಾಗ; ಎಷ್ಟು ದಿನಗಳಲ್ಲಿ ಸದರಿ ಕಾರ್ಯಗಳನ್ನು ಕೈಗೊಳ್ಳಲಾಗುವುದು? | |

ಕಡತ ಸಂಖ್ಯೆ: ಗ್ರಾಅಪ:01/94:ಆರ್‌ಆರ್‌ಸಿ:2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು




Scanned with CamScanner